ವಿಷಯ: ಕಳ್ಳಂಬೆಳ್ಳ ಕ್ಷೇತ್ರದ ವ್ಯಾಪ್ತಿಯಲ್ಲಿ ವಿತರಿಸಿರುವ ಪಡಿತರ ಚೀಟಿ.

882 (1257)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳ್ಳಂಬೆಳ್ಳ ಕ್ಷೇತ್ರದ ವ್ಯಾಪ್ತಿಯಲ್ಲಿ ಇದುವರೆಗೂ ವಿತರಿಸಿರುವ ಹಸಿರು ಮತ್ತು ಕೇಸರಿ ಪಡಿತರ ಚೀಟಿದಾರರುಗಳ ಸಂಖ್ಯೆ ಎಷ್ಟು; ಇವುಗಳನ್ನು ಯಾವಾಗ ವಿತರಿಸಲಾಯಿತು?

ಆ) ಹೊಸ ಪಡಿತರದಾರರಿಗೆ ಹಾಗೂ ಕೆಲವು ಕೈಬಿಟ್ಟು ಹೋದ ಪಡಿತರದಾರರ ಬಗ್ಗೆ ಸಮೀಕ್ಷೆ ಕೈಗೊಂಡು ಪಡಿತರ ಚೀಟಿ ವಿತರಿಸದಿರಲು ಕಾರಣವೇನು; ಪಡಿತರ ಚೀಟಿರಹಿತರಿಗೆ ಪಡಿತರ ಚೀಟಿ ಹಂಚಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜಿ.ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಕಳ್ಳಂಬೆಳ್ಳ ವಿಧಾನಸಭಾ ಕ್ಷೇತ್ರವು ಶಿರಾ ಗುಬ್ಬಿ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳನ್ನು ಆವರಿಸಿರುತ್ತದೆ. ಈ ತನಕ ವಿತರಿಸಿರುವ ಹಸಿರು ಮತ್ತು ಕೇಸರಿ ಕಾರ್ಡುಗಳು ಕೆಳಗಿನಂತಿವೆ.

	ಹಸಿರು	ಕೇಸರಿ	ಒಟ್ಟು
ಅ) ಶಿರಾ	13848	6174	20022
ಆ) ಗುಬ್ಬಿ	4702	1150	5852
ಇ) ಚಿ.ನಾ.ಹಳ್ಳಿ	11458	5734	17192
ಒಟ್ಟು	30008	13058	43066

ಇವುಗಳನ್ನು 1995-96ನೇ ಸಾಲಿನಲ್ಲಿ ವಿತರಿಸಲಾಗಿದೆ.

ಆ) 1995ನೇ ಸಾಲಿನಲ್ಲಿ ತ್ರಿವರ್ಣ ಪಡಿತರ ಚೀಟಿಗಳಿಂದ ಹಸಿರು ಪಡಿತರ ಚೀಟಿಗಳಿಗೆ ಬದಲಾಯಿಸುವ ಕಾರ್ಯಕ್ರಮದಡಿ ಗ್ರಾಮ ಸಭೆಗಳಲ್ಲಿ ಬಂದಿದ್ದ ಎಲ್ಲಾ ಅರ್ಜಿಗಳನ್ನು ಕೂಲಂಕಶವಾಗಿ ಪರಿಶೀಲನೆ ಮಾಡಿ ಪಡಿತರ ಚೀಟಿಗಳನ್ನು ನೀಡಲಾಗಿದೆ.

ಸಮೀಕ್ಷೆ ಕಾರ್ಯದ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ. ಆದರೂ ಈಗ ಸರ್ಕಾರವು ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಎಫ್‌ಸಿಎಸ್ 20 ಡಿಆರ್‌ಎ 97 ದಿನಾಂಕ 15-4-98 ಅನುಸಾರ ಹೊಸ ಕಾರ್ಡುಗಳಿಗಾಗಿ ಅರ್ಜಿ ಸಲ್ಲಿಸಿದ ಎಲ್ಲಾ ಅರ್ಹ ಅರ್ಜಿದಾರರಿಗೆ ಪಡಿತರ ಚೀಟಿಗಳನ್ನು ನೀಡಲಾಗುವುದು.

ವಿಷಯ: ರಾಜ್ಯದಲ್ಲಿರುವ ಸಣ್ಣ ಹಾಗೂ ದೊಡ್ಡ ಕೆರೆಗಳ ಅಭಿವೃದ್ಧಿ.

884 (1385)

ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಣ್ಣ ಮತ್ತು ದೊಡ್ಡ ಕೆರೆಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿದೆಯೇ, ಹಾಗಿದ್ದಲ್ಲಿ ಒಟ್ಟು ಕೆರೆಗಳ ಸಂಖ್ಯೆ ಎಷ್ಟು?

ಆ) ಸಮಸ್ಯೆಯಾಗಿ ವೃದ್ಧಿಸುತ್ತಿರುವ ಕುಡಿಯುವ ನೀರು ಹಾಗೂ ಕೃಷಿಗಾಗಿ ನೀರು ಪೂರೈಕೆಯ ಅಕ್ಷಯ ಪಾತ್ರೆಗಳಂತಿದ್ದ ಕೆರೆಗಳ ಅಭಿವೃದ್ಧಿಗಾಗಿ ಸರ್ಕಾರದವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಯಾವುವು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) ಹೌದು. ಸಣ್ಣ ಮತ್ತು ದೊಡ್ಡ ಕೆರೆಗಳು ಒಟ್ಟು 36679.

ಆ) ಕೆರೆ ಕಲ್ಯಾಣ ಮತ್ತು ಕೆರೆಗಳ ಪುನರುಜ್ಜೀವನ ಶೀರ್ಷಿಕೆಯಲ್ಲಿ ಕೆರೆಗಳ ಅಭಿವೃದ್ಧಿಯನ್ನು ಪ್ರತಿ ವರ್ಷವು ಹಮ್ಮಿಕೊಳ್ಳಲಾಗಿದೆ.

ವಿಷಯ: ಸಚಿವಾಲಯದ ಸಿಬ್ಬಂದಿಗಳನ್ನು ವಿವಿಧ ಇಲಾಖೆಗಳಿಗೆ ನಿಯೋಜಿಸುವುದು.

885 (1493)

ಡಾ. ಎಂ.ಪಿ.ಕರ್ಕಿ (ಕುಮಟಾ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಚಿವಾಲಯದ ಸಿಬ್ಬಂದಿಗಳನ್ನು ಸರ್ಕಾರದ ಇತರೆ ಇಲಾಖೆಗಳಿಗೆ ವರ್ಗಾಯಿಸಲು ಸರ್ಕಾರದವರು ಪರಿಶೀಲಿಸುವರೆ?

ಆ) ವರ್ಗಾಯಿಸದಿದ್ದಲ್ಲಿ ಕಾರಣಗಳೇನು?